# ಫಸ್ಟ್ ಡೇ ಫಸ್ಟ್ ಶೋ!

'ಮನೆಯೇ ಮಂತ್ರಾಲಯ' ಎನ್ನುವಂತೆ 'ಮನೆಯೇ ಸಿನಿಮಾಲಯ' ಪರಿಕಲ್ಪನೆ ಸಾಕಾರಗೊಂಡು ಬಹು ಕಾಲವಾಯಿತು. ಟಿ.ವಿ. ಪರದೆಯ ಸ್ವರೂಪದಲ್ಲಿ ಕ್ರಾಂತಿಕಾರಕ ಬದಲಾವಣೆಗಳು ಆದಂತೆಲ್ಲ, ಮನೆಯ ಗೋಡೆಯ ಮೇಲೆ ಮೂಡುವ ದೃಶ್ಯಗಳಲ್ಲೂ ಸುಧಾರಣೆ ಕಾಣಿಸಿತು. ಆದರೆ, ಈವರೆಗೆ ಮನೆಗಳಲ್ಲಿನ ತೆರೆಗಳಲ್ಲಿ – ಹೋಂ ಥಿಯೇಟರ್‌ಗಳಲ್ಲಿ ಪ್ರದರ್ಶನಗೊಳ್ಳುತ್ತಿದ್ದುದು ಹಳೆಯ ಸಿನಿಮಾಗಳಷ್ಟೇ! ಕಾಲ ಬದಲಾಗಿದೆ, ಚಿತ್ರಮಂದಿರಗಳಲ್ಲಿ ತೆರೆಕಾಣುವ ಸಿನಿಮಾಗಳನ್ನು ಅದೇ ಕಾಲಕ್ಕೆ ನಾವು ನಿಮ್ಮ ಮನೆಯಲ್ಲಿನ ಪರದೆಯ ಮೇಲೆಯೇ ರಿಲೀಸ್ ಮಾಡಲಿದ್ದೇವೆ ಎಂದು ಹೇಳುತ್ತಿದೆ 'ಜಿಯೊ'.

ದೇಶದ ಟೆಲಿಕಾಂ ಕ್ಷೇತ್ರದಲ್ಲಿ ಈಗ ದೈತ್ಯರೂಪಿಯಾಗಿ ಬೆಳೆದು ನಿಂತಿರುವ ಜಿಯೊ ಕಂಪನಿಯು ಬ್ರಾಡ್‌ಬ್ಯಾಂಡ್ ಸೇವಾ ಕ್ಷೇತ್ರವನ್ನು ಪ್ರವೇಶಿಸಲಿದೆ ಎಂಬ ಸುದ್ದಿ ಹಿಂದಿನಿಂದಲೂ ಇತ್ತು. ಅದು ಸೇವೆ ಆರಂಭಿಸಿದ ನಂತರ, ಬ್ರಾಡ್‌ಬ್ಯಾಂಡ್ ಜಗತ್ತಿನಲ್ಲಿ ದರ ಸಮರ ಸೃಷ್ಟಿಯಾಗಬಹುದು ಎಂಬ ನಿರೀಕ್ಷೆ ಗ್ರಾಹಕರಲ್ಲೂ ಇತ್ತು, ಸೇವಾದಾತರಲ್ಲೂ ಇತ್ತು. ಆದರೆ, ಜಿಯೊ ಕಂಪನಿಯ ಬ್ರಾಡ್‌ಬ್ಯಾಂಡ್ ಸೇವೆಗಳು ಸಿನಿಮಾ ಪ್ರದರ್ಶನ ವ್ಯವಸ್ಥೆಯಲ್ಲಿ ತಣ್ಣನೆಯ ಕಂಪನವೊಂದನ್ನು ಸೃಷ್ಟಿಸಬಹುದು ಎಂಬ ನಿರೀಕ್ಷೆ ಬಹುಶಃ ಯಾರಲ್ಲೂ ಇದ್ದಿರಲಿಲ್ಲ.

ಆಗಸ್ಟ್ 12ರಂದು ನಡೆದ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಕಂಪನಿಯ ವಾರ್ಷಿಕ ಸಭೆಯಲ್ಲಿ, ಕಂಪನಿ ಅಧ್ಯಕ್ಷ ಮುಕೇಶ್ ಅಂಬಾನಿ ಹೊಸ ಘೋಷಣೆಯೊಂದನ್ನು ಮಾಡಿದರು. ಅದು ಹೊಸ ಸಿನಿಮಾಗಳ ಬಿಡುಗಡೆಯ ದಿನದ ಮೊದಲ ಪ್ರದರ್ಶನವನ್ನು ಮನೆಯಲ್ಲೇ ಕುಳಿತು ವೀಕ್ಷಿಸುವುದು! ಇದು ಜಿಯೊ ಬ್ರಾಡ್‌ಬ್ಯಾಂಡ್ ಸೇವೆಯ ಜೊತೆಯಲ್ಲೇ ಗ್ರಾಹಕರ ಮನೆಗಳನ್ನು ಪ್ರವೇಶಿಸಲಿದೆ. ಭಾರತದ ಸಿನಿಮಾ ಲೋಕದ ಮಟ್ಟಿಗೆ ತುಸು ಕ್ರಾಂತಿಕಾರಿ ಎನ್ನಬಹುದಾದ ಈ ಘೋಷಣೆಯ ಪರಿಣಾಮವನ್ನು ಅರ್ಥ ಮಾಡಿಕೊಳ್ಳಲು ಮುಂದಾಗುವ ಮುನ್ನ, ಜಿಯೊ ಬ್ರಾಡ್‌ಬ್ಯಾಂಡ್ ಸೇವೆಯು ಎಷ್ಟು ಜನರನ್ನು, ಮನೆಗಳನ್ನು ತಲುಪುವ ಉದ್ದೇಶ ಹೊಂದಿದೆ ಎಂಬುದರತ್ತ ತುಸು ಕಣ್ಣು ಹಾಯಿಸಬೇಕು.

'ಜಿಯೊ ಫೈಬರ್' ಹೆಸರಿನಲ್ಲಿ ಬ್ರಾಡ್‌ಬ್ಯಾಂಡ್ ಸೇವೆಯು ಸೆಪ್ಟೆಂಬರ್ 5ರಿಂದ ವಾಣಿಜ್ಯಿಕ ಚಾಲನೆ ಪಡೆದುಕೊಂಡಿದೆ (ಇದು ಈಗಾಗಲೇ ಹಲವೆಡೆ ಪರೀಕ್ಷಾರ್ಥವಾಗಿ ಚಾಲನೆಯಲ್ಲಿ ಇತ್ತು). ಬ್ರಾಡ್‌ಬ್ಯಾಂಡ್ ಸೇವೆಗಳ ಮಾಸಿಕ ಶುಲ್ಕ ₹ 699ರಿಂದ ಶುರು ಆಗಲಿದೆ. ಡೇಟಾ ಸಂಪರ್ಕದ ವೇಗವು ಪ್ರತಿ ಸೆಕೆಂಡ್‌ಗೆ ಕನಿಷ್ಠ 100 ಎಂ.ಬಿ. ಇರಲಿದೆ. ದೇಶದಾದ್ಯಂತ ಒಟ್ಟು ಎರಡು ಕೋಟಿ ಮನೆಗಳನ್ನು ತಲುಪುವ ಗುರಿ ಜಿಯೊ ಕಂಪನಿಯದ್ದು. 'ಮೊದಲ ದಿನದ ಮೊದಲ ಶೋ' ಸೌಲಭ್ಯವು 2020ರ ಮಧ್ಯಭಾಗದಲ್ಲಿ ಶುರುವಾಗಲಿದ್ದು, ಜಿಯೊ ಫೈಬರ್ ಸಂಪರ್ಕ ಪಡೆದ, ಪ್ರೀಮಿಯಂ ವರ್ಗದ ಗ್ರಾಹಕರೆಲ್ಲರನ್ನೂ ತಲುಪಲಿದೆ ಎಂಬ ವರದಿ ಇದೆ. ಜಿಯೊ ಗುರಿ ಈಡೇರಿದರೆ ಈ ಸೌಲಭ್ಯವನ್ನು ಪಡೆದುಕೊಳ್ಳುವ ಅವಕಾಶ ದೇಶದ ಎರಡು ಕೋಟಿ ಮನೆಗಳಿಗೆ ಲಭ್ಯವಾಗಲಿದೆ. ಅಂದರೆ, ಎರಡು ಕೋಟಿ ಮನೆಗಳ ಜಗುಲಿಯಲ್ಲಿ ಪುಟ್ಟ ಪುಟ್ಟ ಸಿನಿಮಾ ಮಂದಿರಗಳು ರೂಪುಗೊಳ್ಳಬಹುದು! 'ಮೊದಲ ದಿನದ ಮೊದಲ ಶೋ' ಘೋಷಣೆಯ ವ್ಯಾಪ್ತಿ ಎಷ್ಟು ದೊಡ್ಡದು ಎಂಬುದು ಈಗ ಅರ್ಥವಾಗಿರಲಿಕ್ಕೆ ಸಾಕು.

## ಮಾರುಕಟ್ಟೆಯಲ್ಲಿ ಕಂಪನ

ಅಂಬಾನಿ ಅವರು ಈ ಘೋಷಣೆ ಮಾಡಿದ ಪರಿಣಾಮವಾಗಿ ಮುಂಬೈ ಷೇರು ಮಾರುಕಟ್ಟೆಯಲ್ಲಿ ಸಣ್ಣ ಕಂಪನವೊಂದು ಸೃಷ್ಟಿಯಾಯಿತು. ಆಗಸ್ಟ್ 13ರಂದು ಐನಾಕ್ಸ್ ಲೀಷರ್ ಕಂಪನಿಯ ಷೇರು ಮೌಲ್ಯ ಶೇಕಡ 4.22ರಷ್ಟು ಕುಸಿತು ಕಂಡಿತು. ಆ ದಿನದ ವಹಿವಾಟಿನಲ್ಲಿ ಕುಸಿತವು ಶೇಕಡ 9.89ರಷ್ಟರ ಹಂತಕ್ಕೂ ಹೋಗಿತ್ತು. ಇಷ್ಟೇ ಅಲ್ಲ, ಅಂದಿನ ವಹಿವಾಟಿನಲ್ಲಿ ಪಿವಿಆರ್ ಕಂಪನಿಯ ಷೇರು ಬೆಲೆ ಕೂಡ ಶೇಕಡ 4.1ರಷ್ಟು ಕುಸಿಯಿತು. ದಿನದ ವಹಿವಾಟಿನ ಮಧ್ಯದಲ್ಲಿ ಪಿವಿಆರ್ ಷೇರುಗಳ ಬೆಲೆ ಶೇಕಡ 8.21ರಷ್ಟರವರೆಗೆ ಕುಸಿದಿತ್ತು. ಅಂದರೆ, ಜಿಯೊ ಬ್ರಾಡ್‌ಬ್ಯಾಂಡ್ ಸೇವೆಯ ಜೊತೆಯಲ್ಲೇ ಬರಲಿರುವ, ಹೊಸ ಸಿನಿಮಾಗಳು ಬಿಡುಗಡೆ ಆದ ತಕ್ಷಣವೇ ಮನೆಯಲ್ಲೇ ವೀಕ್ಷಿಸುವ ಸೌಲಭ್ಯವು ಮಲ್ಟಿಪ್ಲೆಕ್ಸ್‌ಗಳ ಪಾಲಿಗೆ ಹೊಸ ಸವಾಲನ್ನು ಸೃಷ್ಟಿಸಲಿದೆ ಎಂಬುದು ಷೇರು ಮಾರುಕಟ್ಟೆಗೆ ಸ್ಪಷ್ಟವಾಗಿ ಗೊತ್ತಾಗಿದೆ ಎಂದು ಅರ್ಥ!

ಹಾಗಾದರೆ, ದೂರಸಂಪರ್ಕ ಕ್ಷೇತ್ರದಲ್ಲಿ ಮೊದಲ ಸ್ಥಾನ ತಲುಪಿರುವ ಜಿಯೊ, ಸಿನಿಮಾ ಪ್ರದರ್ಶನ ಕ್ಷೇತ್ರದಲ್ಲಿ ಬಿರುಗಾಳಿ ಸೃಷ್ಟಿಸಲಿದೆಯೇ? ಇಲ್ಲಿಯೂ ಅದು ಏಕಚಕ್ರಾಧಿಪತ್ಯಕ್ಕೆ ಹವಣಿಸಲಿದೆಯೇ? ಅನಿಯಮಿತ ಕರೆಗಳು, ವೇಗದ ಡೇಟಾ, ಸಿನಿಮಾಗಳ ಬೃಹತ್ ಲೈಬ್ರರಿ, ಹೊಸ ವೆಬ್ ಸಿರೀಸ್‌ಗಳು, ಮಕ್ಕಳಿಗೆ

